

# ಅಂಬರದಲ್ಲಿ ಅಂತರ್ಲಾಗ ಹಾಕುವ ಕೆಂಪು ರೆಕ್ಕೆಯ ನೆಲಗುಬ್ಬಿ

ಆಕಾಶದಲ್ಲಿ ವಿವಿಧ ಭಂಗಿಗಳಲ್ಲಿ ಲಾಗ ಹಾಕುತ್ತಾ, ಸುಶ್ರಾವ್ಯವಾಗಿ ಹಾಡುತ್ತಾ ಗಮನಸೆಳೆಯುವ ಈ ಪುಟ್ಟ ಹಕ್ಕಿಯ ನೋಟವೇ ಒಂದು ಚಮತ್ಕಾರ.

**■ ಶಶಿಧರಸ್ವಾಮಿ ಆರ್. ಹಿರೇಮಠ**

ಕಮಲಾಪುರದಿಂದ ದರೋಜಿ ಕರಡಿ ಅಭಯಾರಣ್ಯದತ್ತ ಸಾಗುವ ರಸ್ತೆಯದು. ರಸ್ತೆಯ ಇಕ್ಕೆಲಗಳೂ ಕಲ್ಲುಬಂಡೆಗಳಿಂದ ಕೂಡಿ ಕೆಲವು ಹಕ್ಕಿಗಳಿಗೆ ಆಶ್ರಯತಾಣವಾಗಿವೆ. ಅಲ್ಲೇ ಕಾಣುತ್ತಿದ್ದ ಕಲ್ಲೊಂದರ ಮೇಲೆ ಹಕ್ಕಿಯೊಂದು ಕುಳಿತು ಸುಶ್ರಾವ್ಯವಾಗಿ ಹಾಡುತ್ತಿತ್ತು. ನೋಡನೋಡುತ್ತಿದ್ದಂತೆ ಪುರ್ರೆಂದು ಹಾರಿ ಆಕಾಶದತ್ತ ಎಗರಿತು. ಥಟ್ಟನೆ ಗಾಳಿಯಲ್ಲಿ ಲಾಗ ಹಾಕಿದಂತೆ ಮಾಡುತ್ತಾ ಕೆಳಮುಖವಾಗಿ ಇಳಿದು ಮತ್ತೆ ಅದೇ ಕಲ್ಲಿನ ಮೇಲೆ ಕುಳಿತು ಬಾಲವನ್ನು ಮೇಲೆತ್ತಿ ಮತ್ತೆ ಸುಶ್ರಾವ್ಯ ಗಾಯನ ಕಛೇರಿ ಶುರುಮಾಡಿತು.

ಕ್ಯಾಮೆರಾದ ಚಟರ್... ಚಟರ್... ಸದ್ದು ಹಕ್ಕಿಗೆ ಹುಮ್ಮಸ್ಸನ್ನು ತಂದಿರಬೇಕು – ತನ್ನ ರೆಕ್ಕೆ ಅಗಲಿಸುತ್ತಾ, ತಲೆಯ ಮೇಲಿನ ಪುಕ್ಕಗಳನ್ನು ಅರಳಿಸಿ, ಬಾಲ ಮೇಲೆತ್ತಿ, ಕಾಲುಗಳನ್ನು ಮೇಲೆತ್ತಿ ಗಾಳಿಯಲ್ಲಿ ಎಗರಿದಂತೆ ನಾಟ್ಯ ಮಾಡುತ್ತಾ ಮತ್ತೆ ಕಲ್ಲ ಮೇಲೆ ಕುಳಿತು ಹಾಡುಗಾರಿಕೆ ಮುಂದುವರೆಸಿತು. ದೂರದಿಂದ ಇನ್ನೊಂದು ಹಕ್ಕಿಯ ಗಾಯನದ ನಿನಾದ ತೇಲಿ ಬಂದಾಗ ಅಲ್ಲಿಂದ ಹಾರಿಹೋಯಿತು. ಈ ಹಕ್ಕಿಯೇ 'ಕೆಂಪು ರೆಕ್ಕೆಯ ನೆಲಗುಬ್ಬಿ'.

'ಕೆಂಪು ರೆಕ್ಕೆಯ ನೆಲಗುಬ್ಬಿ' ಹಕ್ಕಿಯನ್ನು 'ಕೆಂಪು ರೆಕ್ಕೆಯ ಪೊದೆಗುಬ್ಬಿ' ಎಂತಲೂ ಕರೆಯುತ್ತಾರೆ. ಹಿಂದಿಯಲ್ಲಿ 'ಅಗ್ಗಿಯಾ' ಎನ್ನುತ್ತಾರೆ. ಇಂಗ್ಲಿಷಿನಲ್ಲಿ 'ರೆಡ್ ವಿಂಗ್ಡ್ ಬುಷ್‌ಲಾರ್ಕ್', 'ಇಂಡಿಯನ್ ಬುಷ್‌ಲಾರ್ಕ್', 'ರೆಡ್ ವಿಂಗ್ಡ್ ಸಿಂಗಿಂಗ್ ಬುಷ್‌ಲಾರ್ಕ್' ಅಥವಾ 'ರಸ್ಟಿ ವಿಂಗ್ಡ್ ಲಾರ್ಕ್' ಎಂದು ಕರೆಯಲಾಗುತ್ತದೆ. ಮಿರಾಫ್ರಾ ಎರಿಥ್ರೋಪ್ಟೆರಾ ಎಂದು ಪಕ್ಷಿಶಾಸ್ತ್ರೀಯವಾಗಿ ಹೆಸರಿಸಿ, ಪಾಸ್ಸರಿಫಾರ್ಮಿಸ್ ಗಣದ, ಅಲೌಡಿಡೇ ಕುಟುಂಬಕ್ಕೆ ಸೇರಿಸಲಾಗಿದೆ.

ಸುಮಾರು 14 ಸೆಂ.ಮೀ. ಗುಬ್ಬಚ್ಚಿ ಗಾತ್ರದ ಕಂದುಬಣ್ಣದ ಹಕ್ಕಿಯಿದು. ಇದರ ರೆಕ್ಕೆಯ ಮೇಲಿನ ಕೆಂಪು ಪಟ್ಟೆಗಳಿಂದ ಇದನ್ನು ಬೇರೆ ನೆಲಗುಬ್ಬಿಗಳಿಂದ ಪ್ರತ್ಯೇಕಿಸಿ ಗುರುತಿಸಬಹುದು. ಹಾರುವಾಗ ಈ ಪಟ್ಟೆ ಬಹಳ ಸ್ಪಷ್ಟವಾಗಿ ಕಾಣುತ್ತದೆ. ಬೆನ್ನ ಮೇಲೆ ಕಂದು, ರೆಕ್ಕೆಗಳಲ್ಲಿ ಕೆಂಪು ವರ್ಣದಿಂದ ಕೂಡಿ ಗಾಢ ವರ್ಣದ ಚುಕ್ಕಿಗಳಿದ್ದು ತಳಭಾಗ ಬಿಳುಪಾಗಿದೆ. ಎದೆಯಲ್ಲಿ ಕಂದು ವರ್ಣದ ಚುಕ್ಕೆಗಳಿವೆ. ಕಂದು ಬಣ್ಣದ ಪುಟ್ಟ ಗಟ್ಟಿ ಕೊಕ್ಕು ಕಾಳು, ಕೀಟಗಳನ್ನು ತಿನ್ನಲು ಅನುಕೂಲಕರವಾಗಿದೆ.

ನೆಲದ ಮೇಲೆ ಓಡಾಡುತ್ತಾ ಕಾಳು, ಬೀಜ, ಕೀಟಗಳನ್ನು ಹುಡುಕಾಡಿ ಭಕ್ಷಿಸುತ್ತದೆ. ಕಾಲುಗಳು ಮಾಸಲು ಕೆಂಪು. ಚಿಕ್ಕ ಚಿಕ್ಕ ಚದುರಿದ ಗುಂಪುಗಳಲ್ಲಿ ಮುಳ್ಳು ಕಂಟೆಗಳಿರುವ ಜಾಗ, ಕಲ್ಲಿನ ನೊರಜು ಜಾಗಗಳಲ್ಲಿ, ಬಂಜರು ಪ್ರದೇಶಗಳಲ್ಲಿ, ಕುರುಚಲು ಕಾಡು, ಕೃಷಿ ಭೂ ಪ್ರದೇಶದ ಪೊದೆ ಹಾಗೂ ನೆಲದ ಆವಾಸಸ್ಥಾನಗಳಲ್ಲಿ ಕಾಣಸಿಗುತ್ತದೆ. ಮುಳ್ಳು ಕಂಟಿಗಳ ಎಲೆಯಿಲ್ಲದ ಬೋಳು ಕೊಂಬೆಗಳಲ್ಲಿ ಹಾಗೂ ಕಲ್ಲುಬಂಡೆಗಳ ಮೇಲೆ ಕುಳಿತು ಸೀ... ಸೀ... ಸೀ... ವ್ಹಿಸೀ... ವ್ಹಿಸೀ... ಎಂಬ ಸ್ವರ ಆಲಾಪನೆಯಿಂದ ಸುಶ್ರಾವ್ಯವಾಗಿ ಹಾಡುತ್ತವೆ. ಈ ಹಕ್ಕಿಗಳು ದಟ್ಟ ಕಾನನಗಳಲ್ಲಿ ಕಂಡುಬರುವುದಿಲ್ಲ.

ಗಂಡು ಹಕ್ಕಿಗಳು ಹಾರಾಟದ ಸರ್ಕಸ್ ಮಾಡುತ್ತಾ ಹಾಡುವ ಹಕ್ಕಿಗಳಾಗಿ ಆಕರ್ಷಕವಾಗಿ ಕಾಣುತ್ತವೆ. ಕೊಂಬೆಗಳಿಂದ ಅಥವಾ ಕಲ್ಲುಬಂಡೆಗಳಿಂದ ಹಾರಿದ ಹಕ್ಕಿ ಅಂಬರದಲ್ಲಿ ಅಂತರ್ಲಾಗ ಹಾಕುತ್ತಾ ಚೀ... ಟ್ವೀ... ಟಿವ್ಹೂ... ಎಂದು ನೀಳಸ್ವರದ ಸಿಳ್ಳಿನಲ್ಲಿ ಹಾಡುತ್ತಾ ಆಕಾಶದಲ್ಲಿ ವಿವಿಧ ಚಮತ್ಕಾರಿ ಭಂಗಿಯ ಹಾರಾಟ ಮಾಡುತ್ತದೆ. ಸಂತಾನಾಭಿವೃದ್ಧಿ ಸಮಯದಲ್ಲಿ ಈ ಚಟುವಟಿಕೆ ಹೆಚ್ಚಾಗಿ ಕಾಣಸಿಗುತ್ತದೆ. ಇದು ಹೆಣ್ಣುಹಕ್ಕಿಯನ್ನು ತನ್ನತ್ತ ಸೆಳೆಯುವ ತಂತ್ರಗಾರಿಕೆ. ಏಪ್ರಿಲ್–ಅಕ್ಟೋಬರ್‌ನಲ್ಲಿ, ಹುಲ್ಲು ದಟ್ಟವಾಗಿರುವ ಪೊದೆಗಳ ನೆಲದಲ್ಲಿ ಹತ್ತಿ, ಹುಲ್ಲು, ಬಟ್ಟೆ ಚೂರು, ಕೂದಲುಗಳಿಂದ ಬಟ್ಟಲಿನಾಕಾರದ ಗೂಡನ್ನು ಕಟ್ಟಿ 2ರಿಂದ 4 ಬೂದು ಮಿಶ್ರಿತ ಬಿಳಿ ಹಳದಿ ವರ್ಣದ ಚುಕ್ಕೆಗಳಿರುವ ಮೊಟ್ಟೆಗಳನ್ನಿಟ್ಟು ಮರಿ ಮಾಡಿಸುತ್ತವೆ.

ಪ್ರತಿಕ್ರಿಯಿಸಿ: feedback@sudha.co.in